**ದಿನಾಂಕ: 12-01-2026ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿಯರ ಪರ ಶ್ರೀ ಎಂ.ಎಸ್.ಎಂ. ವಕೀಲರಿಂದ**

10. ನನ್ನ ತಂದೆ ಭರಮರೆಡ್ಡಿಯವರ ಊರು ಮೂಲತಃ ನಾಚವಾಳ ಇರುತ್ತದೆ. ನನ್ನ ತಂದೆಯ ತಾಯಿ ಹೆಸರು ಅಮ್ಮವ್ವ ಇರುತ್ತದೆ. ಅಮ್ಮವ್ವ ಎಲ್ಲಿ ವಾಸವಾಗಿದ್ದರು ಎಂದರೆ ನಾಚವಾಳದಲ್ಲಿ ಎಂದು ಉತ್ತರಿಸುತ್ತಾರೆ. ನಿಮ್ಮ ತಾತನು ಸಹ ನಾಚವಾಳದಲ್ಲಿ ವಾಸವಾಗಿದ್ದರು ಎಂದರೆ ಮೊದಲು ನಾಚವಾಳದಲ್ಲಿ ಇದ್ದು ನಂತರ ಹತ್ತಿಕುಣಿಗೆ ಬಂದರು ಎಂದು ಉತ್ತರಿಸುತ್ತಾರೆ. ನನ್ನ ತಂದೆಗೆ ಅಣ್ಣತಮ್ಮಂದಿರು ಇಬ್ಬರು ಇರುತ್ತಾರೆ. ನನ್ನ ತಂದೆಯ ಅಣ್ಣನ ಹೆಸರು ಸಿದ್ರಾಮರೆಡ್ಡಿ ಇರುತ್ತದೆ. ಸಿದ್ರಾಮರೆಡ್ಡಿ ಮತ್ತು ನನ್ನ ತಂದೆಗೆ 3 ಜನ ಅಕ್ಕತಂಗಿಯರು ಇರುತ್ತಾರೆ. ಅವರುಗಳೆಂದರೆ ಸೌಭಾಗ್ಯಮ್ಮ, ಚುಕ್ಕಮ್ಮ ಮತ್ತು ಬಸ್ಸಮ್ಮ ಎಂದು ಇರುತ್ತಾರೆ. ಸಿದ್ರಾಮರೆಡ್ಡಿ ಮತ್ತು ನಿಮ್ಮ ತಂದೆಗೆ ನಾಚವಾಳದಲ್ಲಿ ಮನೆ ಮತ್ತು ಆಸ್ತಿ ಇದೆ ಎಂದರೆ ಸರಿ.

11. ನಿಮ್ಮ ತಂದೆಯವರು ನಿಮ್ಮ ತಾಯಿ ನರಸಮ್ಮಗೆ ಮದುವೆ ಮಾಡಿಕೊಂಡ ನಂತರ ಹತ್ತಿಕುಣಿಗೆ ಬಂದು ವಾಸ ಮಾಡುತ್ತಿದ್ದರು ಎಂದರೆ ಮದುವೆ ಆಗುವುದಕ್ಕಿಂತ ಮೊದಲೇ ಬಂದಿದ್ದರು ಶಾಲೆ ಎಲ್ಲಾ ಇಲ್ಲೆ ಕಲಿತಿರುತ್ತಾರೆ ಎಂದು ಉತ್ತರಿಸುತ್ತಾರೆ. ಅವರು ಮೊದಲೇ ಹತ್ತಿಕುಣಿಗೆ ಬಂದಿದ್ದರು ಮತ್ತು ಶಾಲೆ ಇಲ್ಲೆ ಕಲಿತಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

12. ಹತ್ತಿಕುಣಿಯಲ್ಲಿ 32 ಎಕರೆ ಆಸ್ತಿ ಇರುತ್ತದೆ. ಹತ್ತಿಕುಣಿಯಲ್ಲಿ ಒಂದು ಮನೆ ಇರುತ್ತದೆ. ಹತ್ತಿಕುಣಿಯಲ್ಲಿರುವ ಆಸ್ತಿಗಳು ನಮಗೆ ಸಂಬಂಧಪಟ್ಟಿರುತ್ತವೆ. ಹತ್ತಿಕುಣಿಯಲ್ಲಿರುವ ಆಸ್ತಿಗಳು ಯಾರಿಂದ ಬಂದಿದೆ ಎಂದರೆ ನನ್ನ ಅಜ್ಜಿಯ ಗಂಡನ ಆಸ್ತಿ

ಎಂದು ಉತ್ತರಿಸುತ್ತಾರೆ. ಸಾಕ್ಷಿ ಮುಂದುವರೆದು ನಾಗಪ್ಪ ಮತ್ತು ನೀಲಮ್ಮಳ ಆಸ್ತಿ ಎಂದು ಉತ್ತರಿಸುತ್ತಾರೆ. ನಾಗಪ್ಪ ಮತ್ತು ನೀಲಮ್ಮರವರಿಗೆ 32 ಎಕರೆ ಆಸ್ತಿ ಯಾವ ರೀತಿ ಬಂದಿದೆ ಎಂದರೆ ನಮಗೇನು ಗೊತ್ತು ಎಂದು ಉತ್ತರಿಸುತ್ತಾರೆ. ನೀವು, ನಿಮ್ಮ ತಂದೆ, ನಿಮ್ಮ ತಾಯಿ ಹತ್ತಿಕುಣಿಯಲ್ಲಿ ವಾಸವಾಗಿದ್ದೀರಿ ಎಂದರೆ ಸರಿ. ಹತ್ತಿಕುಣಿಯಲ್ಲಿ ನಿಮ್ಮ ಜೊತೆಯಲ್ಲಿ ಯಾರು ಯಾರು ವಾಸವಾಗಿದ್ದರು ಎಂದರೆ ಭರಮರೆಡ್ಡಿ, ನೀಲಮ್ಮ, ನರಸಮ್ಮ, ರಂಗಮ್ಮ, ನಾಗರೆಡ್ಡಿ, ಯಂಕಾರೆಡ್ಡಿ, ಮಲ್ಲಿಕಾರ್ಜುನ ರೆಡ್ಡಿ, ಶರಣಮ್ಮ, ರಾಮಲಿಂಗಮ್ಮ ಮತ್ತು ಆಶಮ್ಮ ಇರುತ್ತಾರೆ ಎಂದು ಉತ್ತರಿಸಿ ಮುಂದುವರೆದು ಆಶಮ್ಮ ಮೊದಲು ಇದ್ದರು ಈಗ ಮದುವೆ ಆಗಿ ಹೋಗಿರುತ್ತಾರೆ ಎಂದು ಉತ್ತರಿಸುತ್ತಾರೆ. ನೀವು ಹತ್ತಿಕುಣಿಯಲ್ಲಿ ವ್ಯವಸಾಯ ಮಾಡಿ ಅಲ್ಲೇ ವಾಸವಾಗಿದ್ದೀರಿ ಎಲ್ಲಿಯೂ ಹೋಗಿಲ್ಲ ಎಂದರೆ ಸರಿ.

13. ದಾವಾ ಆಸ್ತಿಗಳಲ್ಲಿ 1 ಮತ್ತು 2ನೇ ಪ್ರತಿವಾದಿಯರು ಸಾಗುವಳಿಯಲ್ಲಿ ಇದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸಿ ಮುಂದುವರೆದು ನಾವು ಸಹ ಸಾಗುವಳಿಯಲ್ಲಿ ಇದ್ದೇವೆ ಎಂದು ಉತ್ತರಿಸುತ್ತಾರೆ. ನೀವು ದಾವಾದ ಆಸ್ತಿಗಳಲ್ಲಿ ಸಾಗುವಳಿಯಲ್ಲಿ ಇದ್ದೇವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪ್ರತಿವಾದಿಯರ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ